## ಧಾರವಾಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು

೧೨೦೪. **ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?**

**ಅ) ಧಾರವಾಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು? ಪ್ರತಿ ತಾಲ್ಲೂಕು ವಾರು ವಿವರಗಳನ್ನು ಒದಗಿಸುವುದು.**

**ಆ) ಪ್ರತಿ ತಾಲ್ಲೂಕಿನ ಸಹಾಯಕ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿರುವ ಆಡಳಿತಾತ್ಮಕ ನೌಕರರ ಸಂಖ್ಯೆ ಎಷ್ಟು?**

**ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—**

**ಅ)** ೯೪೧೦ (ತಾಲ್ಲೂಕುವಾರು ಶಿಕ್ಷಕರ ಪಟ್ಟಿಯನ್ನು ಲಗತ್ತಿಸಿದೆ.)

**ಆ) ಆಡಳಿತಾತ್ಮಕ ಸಿಬ್ಬಂದಿಗಳು ೧೧೫ ಅವುಗಳಲ್ಲಿ**

ಅಧಿಕ್ಷಕರುಗಳು—೧೮
ಪ್ರಥಮ ದ.ಸ.—೧೨
ದ್ವಿತೀಯ ದ.ಸ.—೩೯
ಬೆರಳಚ್ಚುಗಾರರು—೧೧
ಡಿ, ದರ್ಜೆ ನೌಕರರು—೩೫
ಸಿಬ್ಬಂದಿ ಪಟ್ಟಿ ಲಗತ್ತಿಸಿದೆ.

### ಧಾರವಾಡ ಜಿಲ್ಲೆಯಲ್ಲಿನ ತಾಲ್ಲೂಕುವಾರು ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ

| ತಾಲ್ಲೂಕು | | ಪ್ರಾಥಮಿಕ ಶಾಲಾ ಶಿಕ್ಷಕರು | | |
|---|---|---|---|---|
| | | ಸರ್ಕಾರಿ ಶಾಲೆಗಳು | ಅನುದಾನವುಳ್ಳ ಶಾಲೆಗಳು | ಅನುದಾನರಹಿತ ಶಾಲೆಗಳು |
| ೧ | ೨ | ೩ | ೪ | |
| ೧ | ಮುಂಡರಗಿ | ೨೭೦ | ೨ | ೪ |
| ೨ | ಬ್ಯಾಡಗಿ | ೩೨೯ | ೩ | ೪ |
| ೩ | ಕಲಘಟಗಿ | ೨೨೬ | ೭ | – |
| ೪ | ಗದಗ್ ಸಿಟಿ ವಲಯ | ೩೫೮ | ೩೭ | ೪೩ |
| ೫ | ರಾಣಿಬೆನ್ನೂರು | ೬೯೯ | ೭ | ೧೫ |
| ೬ | ಹಿರೇ ಕೆರೂರು | ೬೪೩ | – | ೭ |
| ೭ | ನರಗುಂದ್ | ೨೦೬ | – | ೪ |
| ೮ | ಹುಬ್ಬಳ್ಳಿ ಗ್ರಾಮಾಂತರ | ೩೮೮ | – | ೯ |
| ೯ | ಸಾವನೂರು | ೨೬೬ | – | ೧ |
| ೧೦ | ಧಾರವಾಡ | ೫೨೬ | ೩೧ | ೫ |
| ೧೧ | ಶಿಗ್ಗಾಂ | ೩೩೯ | – | – |
| ೧೨ | ಕುಂದಗೋಳ | ೩೬೫ | – | – |
| ೧೩ | ನವಲ್‌ಗುಂದ | ೪೬೯ | ೬ | ೫ |
| ೧೪ | ಗದಗ್ ತಾಲ್ಲೂಕು ವಲಯ | ೪೧೯ | ೩ | – |

| ೧ | ೨ | ೩ | ೪ |
|---|---|---|---|
| ೧೫ ಹುಬ್ಬಳ್ಳಿ ಸಿಟಿ ವಲಯ | ೯೭೦ | ೨೫೦ | ೨೭೨ |
| ೧೬ ಶಿರಹಟ್ಟಿ | ೪೫೪ | ೨ | – |
| ೧೭ ಹಾನಗಲ್ | ೪೮೫ | ೪ | – |
| ೧೮ ಹಾವೇರಿ | ೫೪೯ | ೨೯ | ೧೭ |
| ೧೯ ರೋಣ | ೭೧೯ | ೧೩ | – |
| | ೮೬೩೦ | ೩೯೪ | ೩೮೬ |
| | ಒಟ್ಟು ೯,೪೧೦ | | |

ಪ್ರತಿ ತಾಲ್ಲೂಕಿನ ಸಹಾಯಕ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಇರುವ ಆಡಳಿತಾತ್ಮಕ ನೌಕರರ ಸಂಖ್ಯೆಯ ತಃಖ್ತೆ

| ಕ್ರ. ಸಂ. | ಕಛೇರಿಯ ಹೆಸರು | ಶಿರಸ್ತೇದಾರರು | ಪ್ರ. ದ. ಸಹಾಯಕರು | ಪ್ರ. ದ. ಗುಮಾಸ್ತರು | ಬೆರಳಚ್ಚುಗಾರರು | ಡಿ ದರ್ಜೆ ನೌಕರರು |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| | ಸಹಾಯಕ ಶಿಕ್ಷಣಾಧಿಕಾರಿಗಳ ಕಚೇರಿ.— | | | | | |
| ೧ | ಮುಂಡರಗಿ | ೧ | ೧ | ೨ | – | ೧ (ಹಾಗೂ ೧ ಹುದ್ದೆ ಖಾಲಿ ಇದೆ) |
| ೨ | ಕುಂದಗೋಳ | ೧ | ೧ | ೨ | ೧ | ೨ |
| ೩ | ಹುಬ್ಬಳ್ಳಿ ತಾಲ್ಲೂಕ್ | ೧ | ೧ | ೨ | ೧ | ೩ |
| ೪ | ಗದಗ್ (ಗ್ರಾಮಾಂತರ) | ೧ | ೧ | ೨ | ೧ | ೨ (ಹಾಗೂ ೧ ಹುದ್ದೆ ಖಾಲಿ ಇದೆ) |
| ೫ | ರೋಣ | ೧ | ೧ | ೨ | ಖಾಲಿ ಇದೆ | ೨ (ಹಾಗೂ ೧ ಹುದ್ದೆ ಖಾಲಿ ಇದೆ) |
| ೬ | ಶಿರಹಟ್ಟಿ | ೧ | ಖಾಲಿ ಇದೆ | ೨ | ೧ | ೧ (ಹಾಗೂ ೨ ಹುದ್ದೆ ಖಾಲಿ ಇದೆ) |
| ೭ | ರಾಣೆಬೆನ್ನೂರು | ೧ | – | ೨ | ೧ | ೧ (ಹಾಗೂ ೨ ಹುದ್ದೆ ಖಾಲಿ ಇದೆ) |
| ೮ | ಹಾವೇರಿ | ೧ | ೧ | ೨ | ೧ | ೨ ಹುದ್ದೆ ಖಾಲಿ ಇದೆ |
| ೯ | ಗದಗ್ (ನಗರ) | ೧ | ೧ | ೨ | – | ೨ |
| ೧೦ | ಕಲಘಟಗಿ | ೧ | ೧ | ೩ | – | ೨ (ಹಾಗೂ ೧ ಹುದ್ದೆ ಖಾಲಿ ಇದೆ) |
| ೧೧ | ಹಿರೆ ಕೆರೂರು | ೧ | ಖಾಲಿ ಇದೆ | ೨ | ೧ | ೨ ಹುದ್ದೆ (ಹಾಗೂ ೧ಹುದ್ದೆ ಖಾಲಿ ಇದೆ) |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ೧೨ | ಧಾರವಾಡ ತಾಲ್ಲೂಕು | ೧ | ೧ | ೨ | ೧ | ೨ ಹುದ್ದೆ (ಹಾಗೂ ೧ಹುದ್ದೆ ಖಾಲಿ ಇದೆ) |
| ೧೩ | ನವಲಗುಂದ | ೧ | ಖಾಲಿ ಇದೆ | ೨ | ಖಾಲಿ ಇದೆ | ೨ (ಹಾಗೂ ೧ ಹುದ್ದೆ ಖಾಲಿ ಇದೆ) |
| ೧೪ | ಶಿಗ್ಗಾಂವ್ | ೧ | ಖಾಲಿ ಇದೆ | ೧ | ೧ | ೨ (ಹಾಗೂ ೧ ಹುದ್ದೆ ಖಾಲಿ ಇದೆ) |
| ೧೫ | ಹಾನಗಲ್ | ೧ | ೧ | ೨ | ೧ | ೨ (ಹಾಗೂ ೧ ಹುದ್ದೆ ಖಾಲಿ ಇದೆ) |
| ೧೬ | ಸವಣೂರು | ೧ | ಖಾಲಿ ಇದೆ | ೨ | ಖಾಲಿ ಇದೆ | ೨ |
| ೧೭ | ನರಗುಂದ | ೧ | ಖಾಲಿ ಇದೆ | ೨ | ಖಾಲಿ ಇದೆ | ೨ |
| ೧೮ | ಬ್ಯಾಡಗಿ | ೧ | ೧ | ೨ | ಖಾಲಿ ಇದೆ | ೩ |
| ೧೯ | ಹುಬ್ಬಳ್ಳಿ ನಗರ | ೧ | ೧ | ೩ | ೧ | ೧ (ಹಾಗೂ ೨ ಹುದ್ದೆ ಖಾಲಿ ಇದೆ) |
| | | ೧೮ | ೧೨ | ೩೯ | ೧೧ | ೩೫ |

ಧಾರವಾಡ ಜಿಲ್ಲೆಯಲ್ಲಿನ ತಾಲ್ಲೂಕುವಾರು ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ

| | | |
|---|---|---|
| ೧ | ಮುಂಡರಗಿ ತಾಲ್ಲೂಕು | ೭೨ |
| ೨ | ಬ್ಯಾಡಗಿ ತಾಲ್ಲೂಕು | ೮೭ |
| ೩ | ಕಲಘಟಗಿ ತಾಲ್ಲೂಕು | ೯೦ |
| ೪ | ಗದಗ್ ಸಿಟಿವಲಯ | ೫೫ |
| ೫ | ರಾಣೆಬೆನ್ನೂರು | ೧೪೭ |
| ೬ | ಹಿರೇಕೆರೂರ್ | ೧೬೯ |
| ೭ | ನರಗುಂದ್ | ೪೧ |
| ೮ | ಹುಬ್ಬಳ್ಳಿ ಗ್ರಾಮಾಂತರ | ೧೧೩ |
| ೯ | ಸಾವನೂರು | ೮೯ |
| ೧೦ | ಧಾರವಾಡ | ೧೨೧ |
| ೧೧ | ಶಿಗ್ಗಾಂವ್ | ೧೧೪ |
| ೧೨ | ಕುಂದಗೋಳ್ | ೭೭ |
| ೧೩ | ನವಲ್‌ಗುಂದ್ | ೮೧ |
| ೧೪ | ಗದಗ್ | ೭೪ |
| ೧೫ | ಹುಬ್ಬಳ್ಳಿ ಸಿಟಿವಲಯ | ೧೦೬ |
| ೧೬ | ಶಿರಹಟ್ಟಿ | ೪೪ |
| ೧೭ | ಹಾವಗಲ್ | ೧೭೯ |
| ೧೮ | ಹಾವೇರಿ | ೧೩೭ |
| ೧೯ | ಲೋಣ | ೧೪೧ |
| | ಒಟ್ಟು | ೧೯೩೬ |

ಶ್ರೀ ಸಿ.ಎಂ. ಉದಾಸಿ.—ಮಾನ್ಯ ಮಂತ್ರಿಗಳು ನಾನು ಈ ಪ್ರಶ್ನೆ ಕೇಳಿದ್ದರ ಬಗ್ಗೆ ಅರ್ಥ ಮಾಡಿಕೊಂಡಿರಬಹುದು. ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ, ಶಾಲೆಗಳಿಗನುಗುಣವಾಗಿ ಸಿಬ್ಬಂದಿ ವರ್ಗ ಇಲ್ಲದಿರುವುದರಿಂದ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡುವುದಕ್ಕಾಗುವುದಿಲ್ಲವೆಂದು ಗೊತ್ತಾಗುತ್ತದೆ. ಹುಬ್ಬಳ್ಳಿ ಮತ್ತು ಹಾನಗಲ್‌ನಲ್ಲಿ ನೋಡಿದರೆ ಶಿಕ್ಷಕರ ಸಂಖ್ಯೆಗನುಗುಣವಾಗಿ ಆಡಳಿತಾತ್ಮಕ ಅಧಿಕಾರಿಗಳು ಮತ್ತು ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆ ಗುಮಾಸ್ತರ ಸಂಖ್ಯೆ ಇಲ್ಲದಿರುವುದು ಕಂಡು ಬರುತ್ತದೆ. ಈ ತಾರತಮ್ಯವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ ಮಂಜುನಾಥ್.—ಮೊದಲು ಇನ್ನೂ ಕಡಿಮೆ ಇತ್ತು. ಒನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಒನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಜಾಸ್ತಿ ಮಾಡುತ್ತೇನೆ. ಶಿಕ್ಷಕರ ಸಂಖ್ಯೆ ಮತ್ತು ಶಾಲೆಗಳ ಸಂಖ್ಯೆಯನ್ನೂ ಜಾಸ್ತಿ ಮಾಡುತ್ತೇವೆ. ಅದಕ್ಕೋಸ್ಕರ ಮಿನಿಸ್ಟೀರಿಯಲ್ ಸ್ಟಾಫ್ ಅನ್ನು ಜಾಸ್ತಿ ಮಾಡುವುದನ್ನು ಒಪ್ಪುತ್ತೇನೆ. ಈ ಯೋಜನೆಯಲ್ಲಿ ಜಾಸ್ತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

## ರಾಜ್ಯದಲ್ಲಿರುವ ಸರಕಾರಿ ಶಾಲೆಗಳು ಹಾಗೂ ಮಹಾ ವಿದ್ಯಾಲಯಗಳು

೧೧೩೩. ಶ್ರೀ ಎಂ. ವೀರಯ್ಯ ಸ್ವಾಮಿ —ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ನಡೆಯುತ್ತಿರುವ ಒಟ್ಟು ಸರ್ಕಾರಿ ಕಿರಿಯ ಕಾಲೇಜುಗಳು, ಸಂಯುಕ್ತ ಕಿರಿಯ ಕಾಲೇಜುಗಳು ಪ್ರೌಢಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳೆಷ್ಟು ? (ತಾಲ್ಲೂಕುವಾರು ವಿವರ ಒದಗಿಸುವುದು) ?

ಆ) ಮೇಲ್ಕಂಡ ಶಾಲೆಗಳಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಶಾಲೆಗಳೆಷ್ಟು ? (ತಾಲ್ಲೂಕುವಾರು ವಿವರ ಒದಗಿಸುವುದು).

ಇ) ಕಟ್ಟಡಗಳಿಲ್ಲದೆ ಇರುವ ಶಾಲೆಗಳಿಗೆ ಯಾವ ಆಧಾರದ ಮೇಲೆ ಕಟ್ಟಡಗಳನ್ನು ಮಂಜೂರು ಮಾಡಲಾಗುತ್ತಿದೆ ?

ಈ) ಯಾವಾಗ ಇವುಗಳನ್ನು ಮಂಜೂರು ಮಾಡಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಸರ್ಕಾರಿ ಕಿರಿಯ ಕಾಲೇಜುಗಳು ೧೮

ಸಂಯುಕ್ತ ಕಿರಿಯ ಕಾಲೇಜುಗಳು ೩೬೪

ಪ್ರೌಢಶಾಲೆಗಳು ೧೪೨೭

ಹಿರಿಯ ಪ್ರಾಥಮಿಕ ಶಾಲೆಗಳು ೧೨೩೪೧

(ತಾಲ್ಲೂಕುವಾರು ವಿವರಗಳ ಪಟ್ಟಿ ಲಗತ್ತಿಸಿದೆ).

ಆ) ೧ ಸರ್ಕಾರಿ ಕಿರಿಯ ಕಾಲೇಜುಗಳು

೨ ಸಂಯುಕ್ತ ಕಿರಿಯ ಕಾಲೇಜುಗಳು ೩೧೨

೩ ಪ್ರೌಢಶಾಲೆಗಳು ೪೦೮

೪ ಹಿರಿಯ ಪ್ರಾಥಮಿಕ ಶಾಲೆಗಳು ೧೦೩೯೮

(ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ)

ಇ) ಶಾಲಾ ನಿವೇಶನ ಒದಗಿಸಿದ ಹಾಗೆ ಹಾಗೂ ಅಗತ್ಯದ ವೇರೆಗೆ ಹಂತ ಹಂತವಾಗಿ ಶಾಲಾ ಕಟ್ಟಡ ಕಟ್ಟಲು ಮಂಜೂರಾತಿ ನೀಡಲಾಗುವುದು.

ಈ) ಶಾಲಾ ಕಟ್ಟಡಗಳ ಜವಾಬ್ದಾರಿ ಈಗ ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಿದೆ. ಕಿರಿಯ ಕಾಲೇಜು ಕಟ್ಟಡಗಳು ನಿರ್ಮಾಣವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.